## ಚಾಮರಾಜನಗರ ವಿಶ್ವವಿದ್ಯಾನಿಲಯ

### ಮೆಸ್ ಟೆಂಡರ್ ಪ್ರಕಟಣೆ

ಚಾಮರಾಜನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿನಿಲಯ, ಚಾಮರಾಜನಗರ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ, ಸುವರ್ಣಗಂಗೋತ್ರಿ, ಚಾಮರಾಜನಗರ ಇಲ್ಲಿನ ಸ್ನಾತಕ ಪೂರ್ವ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ.1750/-ರ ಮಾಸಿಕ ದರದಲ್ಲಿ ಮೆಸ್ ನಡೆಸಲು ಖಾಸಗಿಯವರಿಂದ ಮೆಸ್ ಅಲ್ಪಾವಧಿ ತೆರೆದ ಟೆಂಡರ್‌ಗಾಗಿ ಅರ್ಜಿಗಳನ್ನು ಅಹ್ವಾನಿಸಿದೆ. ಮೆಸ್ ಟೆಂಡರ್ ಅರ್ಜಿಗಳನ್ನು ವಿದ್ಯಾರ್ಥಿ ಕ್ಷೇಮಪಾಲನ ಕಛೇರಿ, ಸುವರ್ಣಗಂಗೋತ್ರಿ ಚಾಮರಾಜನಗರ ಇಲ್ಲಿ ಅರ್ಜಿ ಶುಲ್ಕ ರೂ.1000/-ಗಳನ್ನು "ಹಣಕಾಸು ಅಧಿಕಾರಿಯವರು, ಚಾಮರಾಜನಗರ ವಿಶ್ವವಿದ್ಯಾನಿಲಯ, ಚಾಮರಾಜನಗರ" ಇವರ ಹೆಸರಿನಲ್ಲಿ ಡಿ.ಡಿ ಪಡೆದು ಸಲ್ಲಿಸಿ ಅರ್ಜಿಯನ್ನು ಪಡೆಯುವುದು. ಅರ್ಜಿಯನ್ನು ದಿನಾಂಕ: 25.09.2023 ರಂದು ಬೆಳಿಗ್ಗೆ 10:00 ಗಂಟೆಯಿಂದ ವಿತರಣೆ ಮಾಡಲಾಗುತ್ತದೆ. ಅರ್ಜಿಗಳನ್ನು ಪಡೆದು ದಿನಾಂಕ:05.10.2023 ಸಂಜೆ 5:30 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಟೆಂಡರ್ ಅರ್ಜಿಗಳನ್ನು ಸಲ್ಲಿಸಿರುವ ಗುತ್ತಿಗೆದಾರರು ಚಾಮರಾಜನಗರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಕಛೇರಿಯಲ್ಲಿ ದಿನಾಂಕ:09.10.2023 ರಂದು ಬೆಳಿಗ್ಗೆ 10:30 ಗಂಟೆಗೆ ಸಂದರ್ಶನಕ್ಕೆ ಹಾಜರಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ: 08226-297512 ಅಥವಾ http://cuc.karnataka.gov.in ಅನ್ನು ಸಂಪರ್ಕಿಸುವುದು.

P. Mahesh ಸಹಿ/-
ಕುಲಸಚಿವರು (ಪರೀಕ್ಷಾಂಗ)
ಚಾಮರಾಜನಗರ ವಿಶ್ವವಿದ್ಯಾನಿಲಯ,
ಚಾಮರಾಜನಗರ.

Registrar (Evaluation)
Chamarajanagara University
Chamarajanagara-571 313

## ಚಾಮರಾಜನಗರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಮೆಸ್ ನಡೆಸಲು ಗುತ್ತಿಗೆಗಾಗಿ ಇರುವ ಕೆಲವು ನಿಬಂಧನೆಗಳು

1. ಪ್ರತಿ ವಿದ್ಯಾರ್ಥಿನಿಲಯಗಳಿಗೂ ಭೋಜನ ವ್ಯವಸ್ಥೆ ನಿರ್ವಹಿಸಲು ಒಬ್ಬರ ಹೆಸರಿನಲ್ಲಿ ಮಾತ್ರ ಪ್ರತ್ಯೇಕವಾಗಿ ಗುತ್ತಿಗೆದಾರರಾಗಿ ಆಯ್ಕೆ ಮಾಡಲಾಗುವುದು.
2. ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಮಹಿಳೆಯರು ಮಾತ್ರ ಟೆಂಡರ್ ಅರ್ಜಿಯನ್ನು ಸಲ್ಲಿಸತಕ್ಕದ್ದು.
3. ಭೋಜನ ವ್ಯವಸ್ಥೆ ನಿರ್ವಹಣೆಗೆ ಸಂಬಂಧಪಟ್ಟಂತೆ ಗುತ್ತಿಗೆದಾರರಾಗಿ ಆಯ್ಕೆಯಾದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ನಿಬಂಧನೆ ಹಾಗೂ ಷರತ್ತುಗಳ ಕರಾರು ಒಪ್ಪಂದವನ್ನು ರೂ.100ರ ಛಾಪಾ ಕಾಗದದಲ್ಲಿ ಸಲ್ಲಿಸಬೇಕು.
4. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಮಾಹೆಯಾನ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ದರದಲ್ಲೇ ಬೆಳಗಿನ ಉಪಹಾರ, ಮಧ್ಯಾಹ್ನ ಹಾಗೂ ರಾತ್ರಿ ಭೋಜನವನ್ನು ಆಹಾರ ಪಟ್ಟಿಯ ಪ್ರಕಾರವೇ ನೀಡತಕ್ಕದ್ದು.
5. ಆಯ್ಕೆಯಾದ ಗುತ್ರಿಗೆದಾರರು ತಮ್ಮ ಕಳೆದ ಮೂರು ವರ್ಷಗಳ ಅಂದರೆ 2020–21, 2021–22 ಮತ್ತು 2022–23ರ ಆರ್ಥಿಕ ಸಾಲಿನ ಆದಾಯ ತೆರಿಗೆ ಪಾವತಿಯ ವಿವರಗಳನ್ನು ಸಲ್ಲಿಸಬೇಕು.
6. ಗುತ್ತಿಗೆದಾರರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆ. ಭೋಜನ ವ್ಯವಸ್ಥೆ ನಡೆಸುವ ವಿಷಯದಲ್ಲಿ ಯಾವುದೇ ವಿವಾದಗಳ ಬಗ್ಗೆ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾದುದು ಹಾಗೂ ಯಾವುದೇ ವಿವಾದಗಳನ್ನು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿಯೇ ಬಗೆಹರಿಸಿಕೊಳ್ಳತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುವುದು.
7. ವಿದ್ಯಾರ್ಥಿನಿಲಯದಲ್ಲಿ ಲಭ್ಯವಿರುವ ಅಡುಗೆ ಸಲಕರಣೆಗಳು ಹಾಗೂ ಪಾತ್ರೆಪರಿಕರಗಳನ್ನು ಮಾತ್ರ ನೀಡಲಾಗುವುದು. ಹೆಚ್ಚಿನ ಅವಶ್ಯಕತೆ ಇರುವ ಸಾಮಾಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳಬೇಕು.
8. ವಿದ್ಯಾರ್ಥಿನಿಲಯವು ನೀಡುವ ಅಡುಗೆ ಸಲಕರಣೆಗಳು ಹಾಗೂ ಪಾತ್ರೆಪರಿಕರಗಳನ್ನು ಟೆಂಡರ್ ಅವಧಿ ನಂತರ ಸುಸ್ಥಿತಿಯಲ್ಲಿ ನೀಡತಕ್ಕದ್ದು.
9. ಅಡುಗೆ ಮನೆ, ವಿದ್ಯುತ್ ಪೂರೈಕೆ, ಪಾತ್ರೆ ಪರಿಕರಗಳು ಮತ್ತು ನೀರು ಸರಬರಾಜಿನ ಶುಲ್ಕವಾಗಿ ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ಈ ಕೆಳಗೆ ನಮೂದಿಸಿರುವಂತೆ ಶುಲ್ಕ/ಬಾಡಿಗೆ ಹಾಗೂ ಮುಂಗಡ ಭದ್ರತಾ ಠೇವಣಿಯನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸತಕ್ಕದ್ದು.

| | ಮಾಹೆಯಾನ ಬಾಡಿಗೆ | ಭದ್ರತಾ ಠೇವಣಿ (ಗುತ್ತಿಗೆ ಪಡೆಯಲು ಒಂದು ಬಾರಿ) |
|---|---|---|
| ಅ. ವಿದ್ಯಾರ್ಥಿನಿಲಯಗಳಲ್ಲಿ 100 ಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳಿದ್ದಲ್ಲಿ ತಿಂಗಳಿಗೆ | ರೂ.: 5,000/– | ರೂ. 15,000/– |
| ಆ. ವಿದ್ಯಾರ್ಥಿನಿಲಯಗಳಲ್ಲಿ 200 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ ತಿಂಗಳಿಗೆ | ರೂ. 7,500/– | ರೂ. 20,000/– |

10. ಆಯ್ಕೆಯಾದ ಗುತ್ತಿಗೆದಾರರು ಮುಂಗಡ ಭದ್ರತಾ ಠೇವಣಿಯಾಗಿ ಮೇಲೆ ಸೂಚಿಸಿರುವ ಮೊತ್ತವನ್ನು "ಹಣಕಾಸು ಅಧಿಕಾರಿಯವರು, ಚಾಮರಾಜನಗರ ವಿಶ್ವವಿದ್ಯಾನಿಲಯ, ಚಾಮರಾಜನಗರ" ಅವರ ಹೆಸರಿನಲ್ಲಿ ಡಿ.ಡಿ. ಪಡೆದು ಸಲ್ಲಿಸುವುದು. ಈ ಮೊತ್ತವನ್ನು ಭೋಜನ ವ್ಯವಸ್ಥೆ ನಿರ್ವಹಣೆಯ ಗುತ್ತಿಗೆಯಿಂದ ಬಿಡುಗಡೆಗೊಂಡ ನಂತರ ಹಿಂತಿರುಗಿಸಲಾಗುವುದು.
11. ಭರ್ತಿ ಗ್ಯಾಸ್ ಸಿಲಿಂಡರ್‌ಗಳನ್ನು ಆಯಾಯ ವಿದ್ಯಾರ್ಥಿನಿಲಯಗಳಿಗೆ ಮಂಜೂರಾತಿ ಇರುವ ಕೋಟದಷ್ಟನ್ನು ಮಾತ್ರ ಸಂಬಂಧ ಪಟ್ಟ ಗ್ಯಾಸ್ ವಿತರಕರಿಂದ ನಿಗದಿಪಡಿಸಲಾಗುವ ಸಬ್ಸಿಡೈಸ್ಡ್/ ಕಮರ್ಷಿಯಲ್ ದರದಲ್ಲಿ ಹಣವನ್ನು ಗುತ್ತಿಗೆದಾರರೇ ಪಾವತಿಸಿ ಪಡೆಯತಕ್ಕದ್ದು.
12. ವಿಶ್ವವಿದ್ಯಾನಿಲಯದ ಎಲ್ಲಾ ಷರತ್ತು ಹಾಗೂ ನಿಬಂಧನೆಗಳಿಗೆ ಬದ್ಧರಾಗಿರುವುದು ಕಡ್ಡಾಯವಾಗಿರುತ್ತದೆ.
13. ವಿಶ್ವವಿದ್ಯಾನಿಲಯದ ವಿರುದ್ಧವಾಗಿ ಯಾವುದೇ ರೀತಿಯ ಕಾನೂನು ಮೊರೆ ಹೋಗಿರುವವರು ಹಾಗೂ ಕಪ್ಪು ಪಟ್ಟಿಯಲ್ಲಿರುವವರು (Black list) ಟೆಂಡರ್‌ನಲ್ಲಿ ಭಾಗವಹಿಸಲು ಅನರ್ಹರು ಎಂದು ಪರಿಗಣಿಸಲಾಗುವುದು.
14. ವಿದ್ಯಾರ್ಥಿಗಳಿಗೆ ಭೋಜನ ಕಲ್ಪಿಸಿ ಕೊಡುವ ಪ್ರತಿ ತಿಂಗಳ ಬಾಬ್ತಿನ ಹಣವನ್ನು ಆಯಾಯ ವಿದ್ಯಾರ್ಥಿನಿಲಯದ ಶಿಕ್ಷಕ ಸಲಹೆಗಾರರ ಶಿಫಾರಸ್ಸಿನೊಂದಿಗೆ ನಿಯಮಾನುಸಾರ ಕಳುಹಿಸುವ ಹುಂಡಿಯ (ಬಿಲ್) ಮೊತ್ತವನ್ನು ಹಂತ ಹಂತವಾಗಿ ಎರಡು/ಮೂರು ತಿಂಗಳ ನಂತರ ಪಾವತಿಸಲಾಗುವುದು.
15. ವಿಶ್ವವಿದ್ಯಾನಿಲಯವು ಸ್ನಾತಕ ಪೂರ್ವ ಮತ್ತು ಸ್ನಾತಕೋತ್ತರ ಒಬ್ಬ ವಿದ್ಯಾರ್ಥಿಗೆ ಮಾಹೆಯಾನ ನಿಗಧಿಪಡಿಸಿರುವ ಭೋಜನದ ಬಾಬ್ತು ರೂ. 1,750/–ಗಳಾಗಿರುತ್ತದೆ.
16. ಭೋಜನ ವ್ಯವಸ್ಥೆಯ ನಿರ್ವಹಣೆಗಾಗಿ ಅಗತ್ಯವಾದ ಸಿಬ್ಬಂಧಿಯನ್ನು ಗುತ್ತಿಗೆದಾರರೇ ನೇಮಿಸಿಕೊಂಡು ಅವರಿಗೆ ವೇತನ ಮತ್ತಿತರ ಸೌಲಭ್ಯವನ್ನು ಗುತ್ತಿಗೆದಾರರೇ ನೀಡಬೇಕು.
17. ಆಯ್ಕೆಯಾದ ಗುತ್ತಿಗೆದಾರರು ವಿಶ್ವವಿದ್ಯಾನಿಲಯವು ಆದೇಶ ಹೊರಡಿಸಿ ನಿಗಧಿಪಡಿಸಿದ ದಿನಾಂಕದಿಂದ ಭೋಜನವನ್ನು ಪ್ರಾರಂಭಿಸಬೇಕು. ಒಪ್ಪಂದ ಪತ್ರದ ನಿಯಮಗಳಿಗನುಸಾರ ಭೋಜನ ನೀಡಬೇಕು. ಕಾರಣವಿಲ್ಲದೆ ಮೆಸ್ ನಿಲ್ಲಿಸಿದಲ್ಲಿ ಅವರ ಮೆಸ್ ಗುತ್ತಿಗೆಯನ್ನು ರದ್ದುಪಡಿಸಿ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
18. ಭೋಜನ ವ್ಯವಸ್ಥೆಯು ಪ್ರಸ್ತುತ ಶೈಕ್ಷಣಿಕ ವರ್ಷ 2023–2024ಕ್ಕೆ ಮಾತ್ರ ಅನ್ವಯವಾಗುತ್ತದೆ. ಗುತ್ತಿಗೆದಾರರ ನೇಮಕಾತಿಯಲ್ಲಿ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮ.
19. 2023–24 ನೇ ಸಾಲಿಗೆ ಆಯ್ಕೆಯಾಗುವ ಮೆಸ್ ಗುತ್ತಿಗೆದಾರರ ಮಾಹೆಯಾನ ಮೆಸ್ ಮೊತ್ತದಲ್ಲಿ ನಿಯಮಾನುಸಾರ ತೆರಿಗೆಗಳನ್ನು ಕಟಾಯಿಸಲಾಗುವುದು.

22/9/23

ನಿರ್ದೇಶಕರು
ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ
ಚಾಮರಾಜನಗರ ವಿಶ್ವವಿದ್ಯಾನಿಲಯ
ಚಾಮರಾಜನಗರ

# CHAMARAJANAGARA UNIVERSITY
## Suvarna Gangotri, Chamarajanagara – 571313

Ph No: 08226-297512 Email: chamarajanagarauniversity@gmail.com

No:CUC/MIS/2023-24 Date: 05.04.2023

2023–24 ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ನೀಡಬೇಕಾಗಿರುವ ಮೆಸ್ ಮೆನು

| ವಾರ | ಬೆಳಗಿನ ಉಪಹಾರ | ಮಧ್ಯಾಹ್ನದ ಊಟ | ರಾತ್ರಿ ಊಟ |
|---|---|---|---|
| ಸೋಮವಾರ | 300 ಗ್ರಾಂ ಚಿತ್ರಾನ್ನ + ಚಟ್ನಿ + 100 ಮಿ.ಲೀ ಕಾಫಿ/ಟೀ | ಅನ್ನ (ಸಾಕಷ್ಟು) + ತರಕಾರಿ ಸಾಂಬಾರು + 100 ಗ್ರಾಂ ಪಲ್ಯ +ತಿಳಿಸಾರು + ಮಜ್ಜಿಗೆ + ಉಪ್ಪಿನಕಾಯಿ | 02 ಚಪಾತಿ + ಅನ್ನ (ಸಾಕಷ್ಟು) + ಕೂಟು/ಗೊಜ್ಜು + ತಿಳಿಸಾರು + ಮಜ್ಜಿಗೆ + ಉಪ್ಪಿನಕಾಯಿ |
| ಮಂಗಳವಾರ | 04 ಇಡ್ಲಿ + 01 ವಡೆ + ಚಟ್ನಿ + ಸಾಂಬಾರ್ + 100 ಮಿ.ಲೀ ಕಾಫಿ/ಟೀ | ಅನ್ನ (ಸಾಕಷ್ಟು) + ತರಕಾರಿ ಸಾಂಬಾರು + 100 ಗ್ರಾಂ ಪಲ್ಯ +ತಿಳಿಸಾರು + ಮಜ್ಜಿಗೆ + ಉಪ್ಪಿನಕಾಯಿ | ಮುದ್ದೆ + ಅನ್ನ (ಸಾಕಷ್ಟು) + ಕಾಳು ಸಾಂಬಾರ್ +ತಿಳಿಸಾರು +ಮಜ್ಜಿಗೆ+ಉಪ್ಪಿನಕಾಯಿ |
| ಬುಧವಾರ | 300 ಗ್ರಾಂ ಟೊಮೊಟೊ ಬಾತ್ +ಚಟ್ನಿ + 10C ಮಿ.ಲೀ ಕಾಫಿ/ಟೀ | ಅನ್ನ (ಸಾಕಷ್ಟು) + ತರಕಾರಿ ಸಾಂಬಾರು + 100ಗ್ರಾಂ ಪಲ್ಯ +ತಿಳಿಸಾರು + ಮಜ್ಜಿಗೆ + ಉಪ್ಪಿನಕಾಯಿ + ಮೊಟ್ಟೆ + ಬಾಳೆಹಣ್ಣು | 02 ಚಪಾತಿ + ಅನ್ನ (ಸಾಕಷ್ಟು) + ಕೂಟು/ಗೊಜ್ಜು + ತಿಳಿಸಾರು + ಮಜ್ಜಿಗೆ +ಉಪ್ಪಿನಕಾಯಿ |
| ಗುರುವಾರ | 300 ಗ್ರಾಂ ಉಪ್ಪಿಟ್ಟು + 100ಗ್ರಾಂ ಕೇಸರೀಬಾತ್+100 ಮಿ ಲೀ ಕಾಫಿ/ಟೀ | ಅನ್ನ (ಸಾಕಷ್ಟು) + ತರಕಾರಿ ಸಾಂಬಾರು + 100 ಗ್ರಾಂ ಪಲ್ಯ +ತಿಳಿಸಾರು + ಮಜ್ಜಿಗೆ + ಉಪ್ಪಿನಕಾಯಿ | ಮುದ್ದೆ + ಅನ್ನ (ಸಾಕಷ್ಟು) + ಕಾಳು ಸಾಂಬಾರ್ + ತಿಳಿಸಾರು + ಮಜ್ಜಿಗೆ+ಉಪ್ಪಿನಕಾಯಿ |
| ಶುಕ್ರವಾರ | 300 ಗ್ರಾಂ ಪುಳಿಯೋಗರೆ + ಚಟ್ನಿ + 100 ಮಿ.ಲೀ ಕಾಫಿ/ಟೀ | ಅನ್ನ (ಸಾಕಷ್ಟು) + ತರಕಾರಿ ಸಾಂಬಾರು + 100 ಗ್ರಾಂ ಪಲ್ಯ+ತಿಳಿಸಾರು + ಮಜ್ಜಿಗೆ + ಉಪ್ಪಿನಕಾಯಿ | 02 ಚಪಾತಿ + ಅನ್ನ (ಸಾಕಷ್ಟು) + ಕೂಟು/ಗೊಜ್ಜು+ತಿಳಿಸಾರು +ಮಜ್ಜಿಗೆ +ಉಪ್ಪಿನಕಾಯಿ |
| ಶನಿವಾರ | 300 ಗ್ರಾಂ ವಾಂಗಿಬಾತ್ + ಚಟ್ನಿ + 100 ಮಿ.ಲೀ ಕಾಫಿ/ಟೀ | ಅನ್ನ (ಸಾಕಷ್ಟು) + ತರಕಾರಿ ಸಾಂಬಾರು + 100 ಗ್ರಾಂ ಪಲ್ಯ+ ತಿಳಿಸಾರು + ಮಜ್ಜಿಗೆ + ಉಪ್ಪಿನಕಾಯಿ | ಮುದ್ದೆ + ಅನ್ನ (ಸಾಕಷ್ಟು) + ಕಾಳು ಸಾಂಬಾರ್ + ತಿಳಿಸಾರು + ಮಜ್ಜಿಗೆ + ಉಪ್ಪಿನಕಾಯಿ |
| ಭಾನುವಾರ ಹಾಗೂ ರಾಷ್ಟ್ರೀಯ ಹಬ್ಬಗಳಲ್ಲಿ | ದೋಸೆ + ಚಟ್ನಿ/ಸಾಗು + 100 ಮಿ.ಲೀ ಕಾಫಿ/ಟೀ | ಅನ್ನ (ಸಾಕಷ್ಟು) + ತರಕಾರಿ ಸಾಂಬಾರು + 100 ಗ್ರಾಂ ಪಲ್ಯ + ತಿಳಿಸಾರು+ ಮಜ್ಜಿಗೆ+ಉಪ್ಪಿನಕಾಯಿ+ಮೊಟ್ಟೆ+ಬಾಳೆಹಣ್ಣು | ಅನ್ನ (ಸಾಕಷ್ಟು) + ಸೊಪ್ಪಿನ ಸಾಂಬಾರ್ +ಮಜ್ಜಿಗೆ+ಉಪ್ಪಿನಕಾಯಿ |

ಸೂಚನೆ :ತಿಂಗಳಿಗೆ 1 ಸಲ ವಿಶೇಷ ಭೋಜನ ಒದಗಿಸಲಾಗುತ್ತದೆ (ಮಾಂಸಹಾರಿಗಳಿಗೆ 120 ಗ್ರಾಂ ಚಿಕನ್ ಹಾಗೂ ಸಸ್ಯಹಾರಿಗಳಿಗೆ ಸಿಹಿ)

ನಿರ್ದೇಶಕರು ಕುಲಸಚಿವರು (ಮೌಲ್ಯಮಾಪನ)